ಎಂದು ಕೆತ್ತಲಾಗಿತ್ತು. ಅದರ ಕೆಳಗೆ ಅದಕ್ಕಿಂತ ಚಿಕ್ಕದಾಗಿ ಒಂದೇ ಸಾಲಿನಲ್ಲಿ 'ಗೌರಿ ಮಾಲಿನಿ ಶಿವರಾಮು' ಎಂದು, ಅದರ ಕೆಳಗೆ 2015 ಎಂದು ಕೆತ್ತಲಾಗಿತ್ತು. ಗೌಡರು ಇನ್ನೊಂದು ಬಾರಿ ಓದಿದರು. ಈ ಕಲ್ಲನ್ನು ತೆಗಿಸಬೇಕೊ ಬೇಡವೋ ಎಂಬ ಆಲೋಚನೆ ಬಂತು. ಚಿಕ್ಕ ಬೀಗದ ಕೈಯಿಂದ ಗೇಟಿಗೆ ಹಾಕಿದ್ದ ಬೀಗ ತೆಗೆದು, ಅದನ್ನು ಅಲ್ಲೇ ಕಂಬಿಗೆ ಹಾಕಿದರು. ಅನೇಕ ದಿನಗಳಿಂದ ಉದುರಿ ಒಣಗಿದ್ದ ಹೂವಿನ ರಾಶಿಯನ್ನೆಲ್ಲ ತೆಗಿಸಿದ್ದಂತೆ ಕಾಣಿಸಿತು. ತಾಜಾ ಹೂವುಗಳು ಹರಡಿಕೊಂಡಿದ್ದವು. ಬಗ್ಗಿ ಏಳೆಂಟು ಹೂವುಗಳನ್ನು ಆಯ್ದುಕೊಂಡರು. ಬೀಗ ಮತ್ತು ಡೋರ್ ಲಾಕ್ ತೆಗೆದು ಒಳಗೆ ಹೆಜ್ಜೆಯಿಟ್ಟರು.

ಇಡೀಮನೆ ಖಾಲಿಯಾಗಿತ್ತು. ಮನೆಯನ್ನು ಸ್ವಚ್ಛಗೊಳಿಸಲಾಗಿತ್ತು. ಹಾಲಿನಲ್ಲಿ ನಿಂತು ಸುತ್ತಲೂ ನೋಡತೊಡಗಿದ ಕೃಷ್ಣೇಗೌಡರಿಗೆ ಎಷ್ಟೋ ವರ್ಷಗಳ ಹಿಂದೆ ಇದೇ ಜಾಗದಲ್ಲಿ ನಿಂತಿದ್ದ ನೆನಪಾಯಿತು. ಅವರು ಈ ಮನೆಯೊಳಕ್ಕೆ ಈಗ ಹೆಜ್ಜೆಯಿಟ್ಟದ್ದು ಮೂರನೆಯ ಬಾರಿ. ಮೊನ್ನೆ ಮೊನ್ನೆ ಪ್ರಾಪರ್ಟಿ ನೋಡಲು ಬಂದದ್ದು ಎರಡನೆಯ ಬಾರಿಯಾಗಿತ್ತು. ಮೊಟ್ಟಮೊದಲ ಬಾರಿಗೆ ಬಂದದ್ದನ್ನು ನೆನಪು ಮಾಡಿಕೊಳ್ಳತೊಡಗಿದರು. ಹೊಸ ವರ್ಷಕ್ಕೆ, ಹಬ್ಬಗಳಿಗೆ, ತಪ್ಪದೆ ಬರ್ತ್ ಡೇಗೆ ಮಾತ್ರ ವಿಶ್ ಮಾಡುತ್ತಿದ್ದ ಗೌರಿ ಹತ್ತು ಹದಿನೈದು ವರ್ಷಗಳ ಹಿಂದೆ ಒಂದು ದಿನ ಒಂದು ಲಾಂಗ್ ಮೆಸೇಜ್ ಕಳಿಸಿದ್ದು ನೆನಪಾಯಿತು. 'ಮೈ ಡಿಯರೆಸ್ಟ್ ಲವ್' ಎಂದು ಪ್ರಾರಂಭಿಸಿ, 'ನಾನು ನನ್ನ ಸ್ವಂತ ದುಡಿಮೆಯಲ್ಲಿ ಸೈಟ್ ತಗೊಂಡು, ಗಂಡನ ಕಡೆಯಿಂದ ಒಂದು ರೂಪಾಯನ್ನೂ ತಗೊಳ್ಳದೆ ಒಂದು ಚಿಕ್ಕ ಮನೆ ಕಟ್ಟಿಸಿದ್ದೇನೆ! ನಮ್ಮಿಬ್ಬರ ಪ್ರೇಮವಂತೂ ಫ್ರೂಟ್‌ಫುಲ್ ಆಗದೆ ಹೋಯ್ತು. ವಿ ಬೋಥ್ ಕುಡ್‌ನಾಟ್ ಲಿವ್ ಅಂಡರ್ ಒನ್ ರೂಫ್. ಸ್ಯಾಡ್ ಇಟ್ ವಾಸ್. ನಮ್ಮಿಬ್ಬರ ದಾರಿ ಬದಲಾದವು. ಐ ಥಿಂಕ್ ಇಟ್ ಈಸ್ ವಾಟ್ ಈಸ್ ಕಾಲ್ಡ್ ಲೈಫ್, ಅಲ್ಲವಾ!? ಇನ್ನೊಂದು ವಾರದಲ್ಲಿ ನಾವು ಹೊಸ ಮನೆಗೆ ಇಳಿತೀವಿ. ನಂದೊಂದು ರಿಕ್ವೆಸ್ಟ್.



ನಾನು ಫ್ಯಾಮಿಲಿ ಮೂವ್ ಮಾಡೋದ್ರೊಳಗೆ ಒಂದು ದಿನ ನೀನು ಬಂದು ನಾನು ಕಟ್ಟಿಸಿರೋ ಈ ಮನೇನ ಒಂದ್ಸಲ ನೋಡಬೇಕು ಅಂತ ನನ್ನಾಸೆ. ಡೋಂಟ್ ಡಿಸಪಾಯಿಂಟ್ ಮೀ. ಲೊಕೇಷನ್ ಶೇರ್ ಮಾಡ್ತೀನಿ. ನೀನು ಯಾವಾಗ ಬರೋದು ಒಂದು ಮೆಸೇಜ್ ಹಾಕು ಪ್ಲೀಸ್... ಪ್ಲೀಸ್.' ಮೆಸೇಜ್ ಓದಿ ಇಡೀದಿನ ಕೃಷ್ಣೇಗೌಡರು ಮೌನಿಯಾಗಿದ್ದರು. ಗತಕಾಲದ ನೆನಪುಗಳಲ್ಲಿದ್ದರು. ಸಂಜೆ ಹೊತ್ತಿಗೆ 'ವಿಲ್ ಕಮ್ ಟುಮಾರೋ ಅಟ್ ಟೆನ್ ಎ ಎಮ್' ಎಂದು ಮೆಸೇಜ್ ಮಾಡಿದ್ದರು.

ಮಾರನೇ ದಿನ ತಿಂಡಿ ಮುಗಿಸಿ ಬಟ್ಟೆ ತೊಡುವಾಗ ಇದ್ದಕ್ಕಿದ್ದಂತೆ ಗೌರಿಗೆ ಗ್ರೇ ಕಲರ್ ಇಷ್ಟವೆಂಬುದು ನೆನಪಾಯಿತು. ಅದೇ ಬಣ್ಣದ ಷರ್ಟ್ ತೊಟ್ಟರು. ತಾವೇ ಕಾರು ತೆಗೆದು ಲೊಕೇಷನ್ ಜಾಡು ಹಿಡಿದು ಹೊರಟಿದ್ದರು. ಅದೇ ಮೊದಲು ಅವರು ಆ ಏರಿಯಾಕ್ಕೆ ಹೋದದ್ದು. ಸುತ್ತಲೂ ಇನ್ನೂ ಮನೆಗಳಾಗಿರಲಿಲ್ಲ.

ಮನೆಯ ಮುಂದಿನ ಜಾಗವೆಲ್ಲಾ ಖಾಲಿಖಾಲಿ. ಕಾಂಪೌಂಡಿನ ಒಳಗೆ ಎಡಭಾಗದಲ್ಲಿ ಒಂದು ಕೈನೆಟಿಕ್ ಹೋಂಡಾ ನಿಂತಿತ್ತು. ಸುಣ್ಣಬಣ್ಣವಾಗಿದ್ದ ಹೊಸ ಮನೆ. ಎರಡೂ ಬಾಗಿಲು ತೆರೆದು ನಡುವೆ ನಿಂತಿದ್ದವಳು ಗೌರಿ ಎಂದು ಗುರುತು ಹಚ್ಚಲು ಇವರಿಗೆ ಕಷ್ಟವಾಗಿರಲಿಲ್ಲ. ಕಾರು ನಿಂತದ್ದು ಕಂಡ ಕೂಡಲೆ ಗೌರಿ ನಡೆಯುತ್ತಾ ಗೇಟ್ ಬಳಿಗೆ ಬಂದು ಇವನ ಎರಡೂ ಕೈಗಳನ್ನು ಹಿಡಿದು 'ಬಂದ್ಯಲ್ಲಾ ಸದ್ಯ, ಬಾ' ಎಂದು ಕರೆದೊಯ್ದಳು. ಹೊಸಿಲು ದಾಟಿ ಹಾಲ್‌ನ ನಡುವೆ ನಿಂತು 'ಇದು ಹಾಲ್ ಕಮ್ ಡೈನಿಂಗ್' ಎಂದು ಅವನ ಕೈಗಳನ್ನು ಚುಂಬಿಸಿದಳು! ಕಿಚನ್, ಕೆಳಗೇ ಇದ್ದ ಒಂದು ರೂಮು ಮತ್ತು ಮಹಡಿ ಮೇಲಿನ ಎರಡು ರೂಮುಗಳನ್ನು ಅವನ ಕೈಯನ್ನು ಹಿಡಿದುಕೊಂಡೇ ತಿರುಗಾಡಿ ತೋರಿಸಿದ್ದಳು. ಮನೆಯ ಪ್ರತಿಯೊಂದು ಹೊಸ ಜಾಗ ತೋರಿಸುವಾಗಲೂ ಗೌರಿ ತನ್ನ ಪುರಾತನ ಪ್ರಿಯಕರನನ್ನು ಚುಂಬಿಸಿದ್ದಳು! 'ಇದೇನು ಹುಡುಗಾಟ' ಅಂದಾಗ 'ಒಂದೇ ಒಂದು